**ದಿಃ14.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 4, 5 19 ರಿಂದ 21 ಪ್ರತಿವಾದಿ ಪರ ವಕೀಲರಿಂದಃ**

7. ಆಲಟ್ಟಿ ಗ್ರಾಮದಲ್ಲಿ ದೊಡ್ಡಯ್ಯನ ಭಾಗಕ್ಕೆ ಹೋದಂತ ಆಸ್ತಿಯನ್ನು ನಾನು ಖರೀದಿಸಿರುತ್ತೇನೆ ಎಂದರೆ ಸರಿ. ಜೋಯಪ್ಪ ಎಂಬುವವರು ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿ 10 ರಿಂದ 15 ರವರು ಜೋಯಪ್ಪರವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ಜೋಯಪ್ಪರವರು ಮೃತಪಟ್ಟ ನಂತರದಲ್ಲಿ ಪ್ರತಿವಾದಿ 10 ರಿಂದ 15 ರವರು ಆಲಟ್ಟಿ ಗ್ರಾಮದಲ್ಲಿ ಜೋಯಪ್ಪರವರ ಭಾಗಕ್ಕೆ ಬಂದ ಆಸ್ತಿಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ 10 ರಿಂದ 15 ರವರು ಜೋಯಪ್ಪರವರು ಬದುಕಿದ್ದ ಸಮಯದಲ್ಲಿಯೇ ಆಲಟ್ಟಿಗೆ ಬಂದಿರುತ್ತಾರೆ. ಅಂದಾಜು 1984 ರಲ್ಲಿ ಜೋಯಪ್ಪರವರು ಆಲಟ್ಟಿ ಗ್ರಾಮಕ್ಕೆ ಬಂದಿರುತ್ತಾರೆ. ಅದಕ್ಕಿಂತ ಮೊದಲು ಜೋಯಪ್ಪರವರು ಗಾಳಿಬೀಡುವಿನಲ್ಲಿ ವಾಸಿಸುತ್ತಿದ್ದರು. ಜೋಯಪ್ಪ ಮತ್ತು ಪ್ರತಿವಾದಿ 10 ರಿಂದ 15 ರವರು ಆಲಟ್ಟಿ ಗ್ರಾಮಕ್ಕೆ ಬರುವ ಪೂರ್ವದಲ್ಲಿ ಗೂನಡ್ಕ ಗ್ರಾಮದಲ್ಲಿ ವಾಸಿಸುತ್ತಿದ್ದರು ಎಂದರೆ ಸುಳ್ಳು. ಗೂನಡ್ಕ ಗ್ರಾಮದಲ್ಲಿ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ 10 ರಿಂದ 15 ರವರು ನನ್ನ ಜೊತೆ ಚೆನ್ನಾಗಿ ಇದ್ದಾರೆ ಎಂದರೆ ಸರಿ. ಪ್ರತಿವಾದಿ 10 ರಿಂದ 15 ರವರು ನನ್ನ ಜೊತೆ ಸೇರಿಕೊಂಡು ಈ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ.

8. ಗಾಳಿಬೀಡುವಿನಲ್ಲಿ ಕರ್ಕರನ ಕುಟುಂಬ ಒಂದು ದೊಡ್ಡ ಕುಟುಂಬ ಎಂದರೆ ಸರಿ. ಗಾಳಿಬೀಡು ಗ್ರಾಮದಲ್ಲಿ ಕರ್ಕರನ ಕುಟುಂಬದ 2 ಶಾಖೆ ಇದೆ. ಸದರಿ 2 ಶಾಖೆಗಳಲ್ಲಿ ಒಂದು ಶಾಖೆ ನಮ್ಮ ಶಾಖೆಯಾಗಿರುತ್ತದೆ ಮತ್ತೊಂದು ಶಾಖೆಯ ಮೂಲ ಪುರುಷನ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹೇಳಿದಂತಹ ಇನ್ನೊಂದು ಶಾಖೆಯ ಕುಟುಂಬಸ್ಥರು ಗಾಳಿಬೀಡುವಿನಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನಾನು

ನ್ಯಾಯಾಲಯಕ್ಕೆ ಹಾಜರು ಪಡಿಸಿರುವಂತಹ ನಿಪಿ.5 ಆರ್.ಟಿ.ಸಿಯಲ್ಲಿ ಕರ್ಕರನ ಬೊಪ್ಪಯ್ಯ, ಕೆ.ಕೆ.ಪೂವಮ್ಮ. ಕೊ.ದಿವಂಗತ ಕೆಂಚಪ್ಪ ಎಂದು ನಮೂದಿಸಿರುವ ವ್ಯಕ್ತಿಗಳು ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ. ಅದೇ ರೀತಿ ನಿಪಿ.8 ಆರ್.ಟಿ.ಸಿಯಲ್ಲಿ ಕಂಡುಬರುವ ಕರ್ಕರನ ಬೊಪ್ಪಯ್ಯ, ನಂಜಪ್ಪ, ಕೆ.ಜಿ ಯಶೋದಮ್ಮ, ಚಿನ್ನಪ್ಪ, ಬೆಳ್ಳಿಯಪ್ಪ. ಪೊನ್ನಪ್ಪ ಲಕ್ಷ್ಮಣ, ಎಂದು ನಮೂದಿಸಿರುವ ವ್ಯಕ್ತಿಗಳು ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ ಆದರೆ ಬೇರೆ ಶಾಖೆಗೆ ಸದಸ್ಯರಾಗಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಸುರೇಶ್, ಸುಬ್ಬಯ್ಯ, ಕೆಪಿ ಬೊಪ್ಪಯ್ಯ, ಪೂವಮ್ಮ, ಕೆ.ಜಿ.ಯಶೋದಮ್ಮ ಎಂಬುವವರು ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ. ಅದೇ ರೀತಿ ನಿಪಿ.9 ರಲ್ಲಿ ಕಂಡುಬರುವ ಕರ್ಕರನ ಬೊಪ್ಪಯ್ಯ, ಕರುಂಬಯ್ಯ ಬಿನ್ ಕೃಷ್ಣ ಮತ್ತು ಕೆ. ಎಂ. ಲೋಕೆಶ್ ಎಂಬುವವರು ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ. ಅದೇ ರೀತಿ ನಿಪಿ.11, 13 ಮತ್ತು 14 ರಲ್ಲಿ ಕರ್ಕರನ ಬೊಪ್ಪಯ್ಯ, ನಂಜಪ್ಪ, ಕೆ.ಜಿ ಯಶೋದಮ್ಮ, ಚಿನ್ನಪ್ಪ, ಸುರೇಶ್, ಲಕ್ಷ್ಮಣ, ಶಿವಣ್ಣ, ಸುಬ್ಬಯ್ಯ, ಕೆ.ಪಿ.ಬೊಪ್ಪಯ್ಯ, ಪೂವಮ್ಮ, ಕೆ.ಡಿ ಕುಟ್ಟಪ್ಪ. ಕೆ.ಕೆ. ಹರೀಶ್, ಕೆ.ಬಿ. ಸಾವಿತ್ರಿ ಎಂದು ನಮೂದಿಸಿರುವ ವ್ಯಕ್ತಿಗಳು ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ. ನಿಪಿ.15 ರಿಂದ 19 ಮತ್ತು 28 ರಲ್ಲಿ ಕರ್ಕರನ ಬೊಪ್ಪಯ್ಯ, ನಂಜಪ್ಪ, ಅಶೋಕ, ಕುಮಾರ, ಕೃಷ್ಣಪ್ಪ ಮತ್ತು ಕರುಂಬಯ್ಯ, ಪೆಮ್ಮಯ್ಯ, ಧನಂಜಯ, ಭುವನೇಶ್, ಪೂವಮ್ಮ, ಕೆ.ಬಿ.ಕುಟ್ಟಪ್ಪ ಮತ್ತು ಕೆ.ಕೆ,ಹರೀಶ್ ಎಂದು ನಮೂದಿಸಿರುವ ವ್ಯಕ್ತಿಗಳು ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ.

9. ನಿಪಿ.23 ರಲ್ಲಿ ಕರ್ಕರನ ಎಸ್.ಮುತ್ತವ್ವ ಎಂದು ನಮೂದಿಸಿರುವ ವ್ಯಕ್ತಿ ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ. ನಿಪಿ.24 ರಲ್ಲಿ ಕರ್ಕರನ ಕರಿಯಪ್ಪ ಮತ್ತು ಮುತ್ತಣ್ಣ ಎಂದು ನಮೂದಿಸಿರುವ ವ್ಯಕ್ತಿಗಳು ನಮ್ಮ ಶಾಖೆಗೆ

ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ. ನಿಪಿ.25 ರಲ್ಲಿ ಕರ್ಕರನ ಎಸ್.ಮುತ್ತಪ್ಪ ಎಂದು ನಮೂದಿಸಿರುವ ವ್ಯಕ್ತಿ ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ. ನಿಪಿ.27 ರಲ್ಲಿ ಕಾಣುವ ಕೆ.ಜಿ.ಪೆಮ್ಮಯ್ಯ, ಕೆ.ಜಿ.ಧನಜಂಯ, ಕೆ.ಜಿ.ಭುವನೇಶ್ ಎಂದು ನಮೂದಿಸಿರುವ ವ್ಯಕ್ತಿಗಳು ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ. ನಿಪಿ.29 ಮತ್ತು 30 ರಲ್ಲಿ ಕರ್ಕರನ ಬೊಪ್ಪಯ್ಯ ಎಂದು ನಮೂದಿಸಿರುವ ವ್ಯಕ್ತಿ ನಮ್ಮ ಶಾಖೆಗೆ ಸಂಬಂಧಿಸಿದ ಸದಸ್ಯರಾಗಿರುವುದಿಲ್ಲ.

10. ದಾವಾ ಶೊಡ್ಯಾಲ್ ಐಟಂ ನಂ.1 ರಿಂದ 31 ಆಸ್ತಿಗಳಲ್ಲಿ ತಿಮ್ಮಯ್ಯರವರಿಗೆ ಸಂಬಂಧಿಸಿದ ಆಸ್ತಿ ಯಾವುದು ಎಂದು ಹೇಳಲು ನಿಖರವಾಗಿ ಆಗುವುದಿಲ್ಲ ಎಂದರೆ ಸರಿ. ಗಾಳಿಬೀಡುವಿನ ಕರ್ಕರನ ಕುಟುಂಬಕ್ಕೆ ಸೇರಿದ ಯಾವುದೇ ಆಸ್ತಿಗಳಲ್ಲಿ ನನಗೆ ಹಕ್ಕು ಇರುವುದಿಲ್ಲ ಆದ ಕಾರಣ ನನಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ ಎಂದರೆ ಸುಳ್ಳು. ದೊಡ್ಡಯ್ಯ ಮತ್ತು ಮೊಣ್ಣಪ್ಪರವರ ಭಾಗಕ್ಕೆ 1971 ರಲ್ಲಿ ಆದಂತಹ ವಿಭಾಗದಲ್ಲಿ ಬಂದಂತಹ ಗಾಳಿಬೀಡು ಆಸ್ತಿಯನ್ನು ನಾವು ಹೊಡೆದುಕೊಳ್ಳುವ ಸಲುವಾಗಿ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಜ್ಜ ನನ್ನ ಚಿಕ್ಕಪ್ಪನಾದ ಜೋಯಪ್ಪರವರಿಗೆ ಗೂನಡ್ಕದಲ್ಲಿ ಆಸ್ತಿಯನ್ನು ಖರೀದಿಸಿ ಕೊಟ್ಟಿದ್ದರೂ ಕೂಡ ಸದರಿ ವಿಷಯ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ನಿಪಿ.33 ಕ್ರಯಪತ್ರದಂತೆ 3 ರಿಂದ 5 ನೇ ಪ್ರತಿವಾದಿ ದಾವಾ ಶೆಡ್ಯೂಲ್ ಐಟಂ ನಂ. 3 ಆಸ್ತಿಯನ್ನು 16 ನೇ ಪ್ರತಿವಾದಿಯವರಿಗೆ ಸಂಪೂರ್ಣ ಮಾಲೀಕತ್ವದಲ್ಲಿ ಮಾರಾಟ ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ ನಿಪಿ.35 ಕ್ರಯಪತ್ರದಂತೆ 5 ನೇ ಪ್ರತಿವಾದಿ ಅವರ ಮಕ್ಕಳಾದ 19 ರಿಂದ 21 ರವರು 3(ಎ) ಮತ್ತು 4 ನೇ ಪ್ರತಿವಾದಿ ದಾವಾ ಶೆಡ್ಯೂಲ್ ಐಟಂ ನಂ.28 ಮತ್ತು 29 ಆಸ್ತಿಯನ್ನು 22 ರಿಂದ 24 ನೇ ಪ್ರತಿವಾದಿಯವರಿಗೆ ಸಂಪೂರ್ಣ ಮಾಲೀಕತ್ವದಲ್ಲಿ

ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಈ ರೀತಿಯಾಗಿ ಮಾರಾಟ ಮಾಡಿದಂತಹ ಆಸ್ತಿಗಳು 1971 ರ ವಿಭಾಗ ಪತ್ರದ ಪ್ರಕಾರ ದೊಡ್ಡಯ್ಯರವರ ಹಿಸ್ಸೆಗೆ ಬಂದಿರುವಂತಹ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು.

12. ಗಾಳಿಬೀಡುವಿನ ಆಸ್ತಿಗೆ ಸಂಬಂಧಿಸಿದಂತೆ ದೊಡ್ಡಯ್ಯ ಮತ್ತು ಮೊಣ್ಣಪ್ಪರವರ ನಡುವೆ ಹಲವು ದಾವೆಗಳು ಇತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ಯಾವುದೆಲ್ಲಾ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನಿಪಿ.4 ರಿಂದ 30 ಆರ್.ಟಿ.ಸಿಗಳಲ್ಲಿ ತಿಳಿಸಿರುವಂತಹ ಎಲ್ಲಾ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸುಳ್ಳು. 1971 ರಲ್ಲಿ ನನ್ನ ಅಜ್ಜನಿಗೆ ಸಂಬಂಧಿಸಿದ ಒಟ್ಟು ಕುಟುಬಂದ ವಿಭಜನೆ ಆಗಿರುತ್ತದೆ ಎಂದರೆ ಸುಳ್ಳ. ಆದ ಕಾರಣ ಈ ದಾವೆ ಸುಳ್ಳು ದಾವೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತಹ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.